ಇ) 2 ವರ್ಷಗಳಿಂದಲೂ ಭೂಸ್ವಾಧೀನ ಪ್ರಕರಣಗಳ ಪ್ರಕ್ರಿಯೆಗಳು ಜಾರಿಯಲ್ಲಿದ್ದು, ಕಾಯಿದೆಯಲ್ಲಿ ಇಷ್ಟು ಅವಧಿಗಿಂತಲೂ ಹೆಚ್ಚಿಗೆ ಅವಕಾಶ ಇದ್ದು ಅವಧಿಯ ಒಳಗಾಗಿ ಮೇಲೆ (ಅ)ನಲ್ಲಿ ತಿಳಿಸಿದಂತೆ ಪರಿಹಾರವನ್ನೂ ಪಾವತಿ ಮಾಡಲಾಗುವುದು. ಬೆಳೆಯ ಪರಿಹಾರ ಧನವನ್ನು ಇಲಾಖೆಯ ನಿಯಮಾನುಸಾರ ಪೂರೈಸಲಾಗುವುದು.

ಕರ್ನಾಟಕ ನಿರ್ಮಾಣ ನಿಗಮದ ಪ್ರಗತಿಯ ಬಗ್ಗೆ

658 - ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್) : ಮಾನ್ಯ ಲೋಕೋಪಯೋಗಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕರ್ನಾಟಕ ರಾಜ್ಯ ನಿರ್ಮಾಣ ನಿಗಮವನ್ನು ಯಾವಾಗ ಪ್ರಾರಂಭಿಸಲಾಯಿತು?

ಆ) ಅದಕ್ಕೆ ಹೂಡಲಾಗಿರುವ ಸರ್ಕಾರಿ ಬಂಡವಾಳವೆಷ್ಟು?

ಇ) ಅದರ ಕಾರ್ಯ ಚಟುವಟಿಕೆಗಳೇನು?

ಈ) ಅದರಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸಿಬ್ಬಂದಿ ವರ್ಗದ ಸಂಖ್ಯೆ ಎಷ್ಟು?

ಉ) ಆ ನಿಗಮವು ಪ್ರಾರಂಭವಾದಾಗಿನಿಂದ ಇಲ್ಲಿಯವರೆವಿಗೆ ಎಷ್ಟು ಲಾಭವನ್ನು ಗಳಿಸಿದೆ. ಇಲ್ಲವೇ ಎಷ್ಟು ಪ್ರಮಾಣದ ನಷ್ಟವನ್ನು ಅನುಭವಿಸಿದೆ. (ವರ್ಷವಾರು ಅಂಕಿ ಅಂಶಗಳನ್ನು ನೀಡುವುದು)

ಊ) ಆ ನಿಗಮವನ್ನು ಮುಚ್ಚುವ ಬಗ್ಗೆ ಸರ್ಕಾರವು ಪರಿಶೀಲಿಸುವುದೇ?

ಶ್ರೀ ಕೆ.ಹೆಚ್. ರಂಗನಾಥ್ (ಲೋಕೋಪಯೋಗಿ ಸಚಿವರು) :

ಅ) 13-9-1968

ಆ) 205.00 ಲಕ್ಷ ರೂ.ಗಳು

ಇ) ಅಣೆಕಟ್ಟು ಸೇತುವೆ, ಕಟ್ಟಡಗಳು ರಸ್ತೆ, ರಹದಾರಿಗಳು, ಕಾಲುವೆ ಹಾಗೂ ಸುರಂಗಗಳ ನಿರ್ಮಾಣ ಕಾರ್ಯ

ಈ) ಒಟ್ಟು - 326
ನಿಯೋಜಿತರು - 62
ನಿಗಮದವರು - 264

ಉ) ನಿಗಮವು ಪ್ರಾರಂಭವಾದಾಗಿನಿಂದ ಇದುವರೆಗೂ ಅನುಭವಿಸಿರುವ ಲಾಭ ಮತ್ತು ನಷ್ಟಗಳನ್ನು ಕೂಡಿ ಹಾಕಿದಲ್ಲಿ 31-3-93ರವರೆಗೆ ಒಟ್ಟು 76.15 ಲಕ್ಷ ರೂ.ಗಳಷ್ಟು ನಷ್ಟ ಶೇಖರಣೆಯಾಗಿರುತ್ತದೆ. ವಿವರವನ್ನು ಅನುಬಂಧದಲ್ಲಿ ನೀಡಿದೆ.

ಊ) ಈ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿಲ್ಲ.

ಅನುಬಂಧ

1969-1993ರ ವರೆಗೆ ಕರ್ನಾಟಕ ರಾಜ್ಯ ನಿರ್ಮಾಣ ನಿಗಮದ ಲಾಭ, ನಷ್ಟದ ವಾರ್ಷಿಕ ವಿವರಗಳು

ವರ್ಷ	ಲಾಭ (ಲಕ್ಷ ರೂ.ಗಳಲ್ಲಿ)	ನಷ್ಟ (ಲಕ್ಷ ರೂ.ಗಳಲ್ಲಿ)
1969	0.05	-
1969-70	-	2.71
1970-71	-	10.78

1971-72	-	8.67
1972-73	-	18.63
1973-74	-	22.29
1974-75	-	28.00
1975-76	-	19.03
1976-77	-	14.00
1977-78	-	8.09
1978-79	-	28.50
1979-80	-	29.33
1980-81	-	51.07
1981-82	-	13.76
1982-83	-	36.71
1983-84	-	53.54
1984-85	-	61.06
1985-86	28.91	-
1986-87	9.92	-
1987-88	-	45.26
1988-89	-	67.94
1989-90	-	8.79
1990-91	30.28	-
1991-92	152.85	-
1992-93(ಪ್ರಾವಿಷನಲ್)	230.00	-
	452.01	528.16

ನಷ್ಟ	-	528.16
ಲಾಭ	-	452.01
ನಿವ್ವಳ ನಷ್ಟ	-	76.15

ಸೇಡಂ ತಾಲ್ಲೂಕಿನ ಕೆಲವು ಪ್ರಾಂತ್ಯಕ್ಕೆ ವಿದ್ಯುತ್ ಕಡಿತ ಕುರಿತು

733 - ಶ್ರೀ ಬಸವಂತ ರೆಡ್ಡಿ ಮೋತಕಪಲ್ಲಿ (ಸೇಡಂ): ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಗುಲ್ಬರ್ಗಾ ಜಿಲ್ಲೆಯ ಸೇಡಂ ತಾಲ್ಲೂಕಿನ ಆಂಧ್ರ ಗಡಿ ಪ್ರಾಂತ್ಯಕ್ಕೆ ಹೊಂದಿಕೊಂಡಿರುವ ಗ್ರಾಮಗಳಲ್ಲಿ ಗುರುಮಿಠಕಲ್ ಪವರ್ ಸಬ್ ಸ್ಟೇಷನ್‌ನಿಂದ ವಿದ್ಯುಚ್ಛಕ್ತಿ ಸರಬರಾಜು ಆಗುವುದನ್ನು ಪ್ರತಿದಿನ ಬೆಳಿಗ್ಗೆ 3.00 ಗಂಟೆ, ಸಾಯಂಕಾಲ 3.00 ಗಂಟೆ ಕಡಿತ ಮಾಡಲು ಕಾರಣವೇನು?

ಆ) ಈ ಪ್ರಕಾರ ಬೆಳಿಗ್ಗೆ 5.00 ಗಂಟೆಯಿಂದ 8.00 ಗಂಟೆಯವರೆಗೆ, ಸಾಯಂಕಾಲ 5.00 ಗಂಟೆಯಿಂದ 8,00 ಗಂಟೆಯವರೆಗೆ ಕಡಿತವಾದರೆ ವಿದ್ಯುಚ್ಛಕ್ತಿ ಇದ್ದು ಪ್ರಯೋಜನವೇನು?